## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಸದಸ್ಯರ ಹೆಸರು | : | ಶ್ರೀ ಡಿ.ಟಿ.ಶ್ರೀನಿವಾಸ್ (ಡಿ.ಟಿ.ಎಸ್) (ಶಿಕ್ಷಕರ ಕ್ಷೇತ್ರ) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1236 (1160) |
| ಉತ್ತರಿಸುವ ದಿನಾಂಕ | : | 18.03.2025 |
| ಉತ್ತರಿಸುವ ಸಚಿವರು | : | ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ನಗರಾಭಿವೃದ್ಧಿ ಮತ್ತು ನಗರ ಯೋಜನೆ ಅಡಿ ವ್ಯಾಪ್ತಿಗೆ ಬರುವ ಪ್ರಾಧಿಕಾರಗಳು ಹಾಗೂ ಸ್ಥಳೀಯ ಸಂಸ್ಥೆಗಳು ಯಾವುವು; (ಜಿಲ್ಲಾವಾರು ಮಾಹಿತಿ ಒದಗಿಸುವುದು) | ರಾಜ್ಯದಲ್ಲಿ ಒಟ್ಟು 33 ನಗರಾಭಿವೃದ್ಧಿ ಪ್ರಾಧಿಕಾರಗಳು, 43 ಯೋಜನಾ ಪ್ರಾಧಿಕಾರಗಳು, 77 ಪುರಸಭೆ ಯೋಜನಾ ಪ್ರಾಧಿಕಾರಗಳು ಇರುತ್ತವೆ.<br>(ಜಿಲ್ಲಾವಾರು ಮಾಹಿತಿಯನ್ನು **ಅನುಬಂಧದಲ್ಲಿ ನೀಡಲಾಗಿದೆ.**) |
| ಆ) | ಕರ್ನಾಟಕದಲ್ಲಿರುವ ಎಲ್ಲಾ ನಗರ ಪ್ರದೇಶಗಳಿಗೆ ನಗರ ಯೋಜನೆಯ ಯೋಜನಾ ನಕ್ಷೆಯನ್ನು ಸಿದ್ಧಪಡಿಸಲಾಗಿದೆಯೇ; | ಕರ್ನಾಟಕದಲ್ಲಿ ಒಟ್ಟು 161 ಸ್ಥಳೀಯ ಯೋಜನಾ ಪ್ರದೇಶಗಳು ಘೋಷಣೆಯಾಗಿದ್ದು, ಆ ಪೈಕಿ 107 ನಗರ / ಪಟ್ಟಣಗಳಿಗೆ ಮಹಾಯೋಜನೆ ನಕ್ಷೆ ಸಿದ್ಧಪಡಿಸಲಾಗಿದೆ. |
| ಇ) | ನಗರ ಯೋಜನಾ ನಕ್ಷೆಯನ್ನು ಸಿದ್ಧಪಡಿಸಲಾಗಿದ್ದಲ್ಲಿ ಅನಧಿಕೃತ ಬಡಾವಣೆಗಳ ನಿರ್ಮಾಣ ಏಕೆ ಮಾಡಲಾಗುತ್ತಿದೆ; | ಮಹಾಯೋಜನೆ ನಕ್ಷೆಯಲ್ಲಿ ಕಾಯ್ದಿರಿಸಲಾಗುವ ಭೂ ಉಪಯೋಗಕ್ಕೆ ಹಾಗೂ ವಲಯ ನಿಯಮಾವಳಿಗಳಿಗನುಗುಣವಾಗಿ ವಿನ್ಯಾಸ ನಕ್ಷೆಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆಯಡಿ ಅನುಮೋದನೆ ನೀಡಲಾಗುತ್ತದೆ. ಕಾಯ್ದೆಯಡಿ ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆಯದೇ ಖಾಸಗಿಯಾಗಿ ಅಕ್ರಮವಾಗಿ ಬಡಾವಣೆಗಳ ಅಭಿವೃದ್ಧಿ ಕೈಗೊಂಡಲ್ಲಿ ಅನಧಿಕೃತ ಬೆಳವಣಿಗೆಗಳು ನಿರ್ಮಾಣಗೊಳ್ಳುತ್ತವೆ. |
| ಈ) | ನಗರ ಯೋಜನೆಯ ನಕ್ಷೆಯನ್ನು ಎಷ್ಟು ವರ್ಷಗಳಿಗೊಮ್ಮೆ ನವೀಕರಿಸಲಾಗುವುದು; | ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 13(ಡಿ) ರನ್ವಯ ಪ್ರತಿ ಹತ್ತು ವರ್ಷಗಳಿಗೊಮ್ಮೆ ಮಹಾಯೋಜನೆಯನ್ನು ಪರಿಷ್ಕರಿಸಲಾಗುತ್ತದೆ.<br>ನಗರಗಳ ಜನಸಂಖ್ಯೆ, ಭೂ ಬಳಕೆ ಮತ್ತು ಭವಿಷ್ಯದ ದೃಷ್ಟಿಕೋನ ಆಧರಿಸಿ ಮಹಾಯೋಜನೆಯನ್ನು ಪರಿಷ್ಕರಿಸಿ, ಸದರಿ ಮಹಾಯೋಜನೆಯಲ್ಲಿ ಭೂ ಉಪಯೋಗಗಳಿಗನುಗುಣವಾಗಿ ಅಭಿವೃದ್ಧಿಗಳಿಗೆ ಅನುಮೋದನೆ ನೀಡಲಾಗುತ್ತಿದೆ. |
| ಉ) | ಈ ರೀತಿ ನವೀಕರಿಸಲಾದ ಯೋಜನೆಗಳ ನಕ್ಷೆಯ ಪ್ರಕಾರ ನಗರಗಳ ಅಭಿವೃದ್ಧಿ ಸಾಧ್ಯವಿದೆಯೇ; ಇಲ್ಲದೇ ಇದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು? | |

**ಸಂಖ್ಯೆ: ನಅಇ 19 ಎಲ್‌ಸಿಕ್ಯೂ 2025 (ಇ)**

(ಬಿ.ಎಸ್. ಸುರೇಶ),
ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು